**ಕರ್ನಾಟಕ ಸರ್ಕಾರ**
**ರೇಷ್ಮೆ ಇಲಾಖೆ**

ಸಂಖ್ಯೆ/ರೇನಿ/ಪಿಎಸ್-5/CDP/ಹನಿ/60/2013-14

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರ ಕಚೇರಿ,
ಬೆಂಗಳೂರು, ದಿನಾಂಕ:24-12-2014.

**ಸು ತ್ತೋ ಲೆ**

ವಿಷಯ: 2014-15ನೇ ಸಾಲಿನಲ್ಲಿ ಹನಿ ನೀರಾವರಿ ಅಳವಡಿಸುವ ಸಂಸ್ಥೆಗಳನ್ನು ಗುರುತಿಸುವ ಬಗ್ಗೆ.

ಉಲ್ಲೇಖ:
1. ತೋಟಗಾರಿಕೆ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ತೋಇ/ತೋಜಂನಿ(ಹನೀ)/ಸುತೋಅ-1/9/2014-15 ದಿ:01-08-2014.
2. ಈ ಕಛೇರಿ ಸಮಸಂಖ್ಯೆ ಪತ್ರ ದಿನಾಂಕ:25-08-2014.
3. ಈ ಕಛೇರಿ ಸಮಸಂಖ್ಯೆ ಪತ್ರ ದಿನಾಂಕ:01-08-2014.
4. ಈ ಕಛೇರಿ ಸುತ್ತೋಲೆ ಸಂ:ಪಿಎಸ್5/ಸಿಡಿಪಿ/12ನೇ ಯೋಜನೆ/ಮಾರ್ಗಸೂಚಿ/18/2014-15, ದಿನಾಂಕ:26-08-2014.

******

ರೇಷ್ಮೆ ಇಲಾಖೆಯ ಕೇಂದ್ರ ಪುರಸ್ಕೃತ ಕೆಟಲಿಟಿಕ್ ಅಭಿವೃದ್ಧಿ ಯೋಜನೆಯಡಿ ಹನಿನೀರಾವರಿ ಘಟಕ ಅಳವಡಿಕೆಗೆ ಸಹಾಯಧನ ನೀಡಲಾಗುತ್ತಿದೆ.

ಇದಕ್ಕಾಗಿ ತೋಟಗಾರಿಕೆ ಇಲಾಖೆಯಲ್ಲಿ ಹನಿನೀರಾವರಿ ಅಳವಡಿಸಲು ಗುರುತಿಸಿರುವ ಸಂಸ್ಥೆಗಳನ್ನು ರೇಷ್ಮೆ ಇಲಾಖೆಯಲ್ಲಿಯೂ ಗುರುತಿಸಿ ಮುಂದುವರೆಸಲು ಕ್ರಮ ವಹಿಸಲಾಗುವ ನಿಟ್ಟಿನಲ್ಲಿ ಉಪಕರಣಗಳಿಗೆ BIS validity certificate ಹಾಗೂ ಇಲಾಖೆಯ ಷರುತ್ತುಗಳಿಗೆ ಒಪ್ಪಿ ರೂ.100/- ಛಾಪಾ ಕಾಗದದಲ್ಲಿ ಕರಾರು ಒಪ್ಪಂದ ಪಡೆದು ಸಂಸ್ಥೆಗಳನ್ನು ಗುರುತಿಸಲಾಗುತ್ತಿದೆ.

ಅದರಂತೆ 2013-14ನೇ ಸಾಲಿನಲ್ಲಿ 25 ಸಂಸ್ಥೆಗಳನ್ನು ಗುರುತಿಸಲಾಗಿದ್ದು, ಸಂಸ್ಥೆಗಳ ಅವಧಿ ದಿನಾಂಕ 30.11.2014ಕ್ಕೆ ಮುಕ್ತಾಯವಾಗಿರುತ್ತದೆ. ಆದ್ದರಿಂದ 2014-15ನೇ ಸಾಲಿನಲ್ಲಿ ಉಳಿದ ಅವಧಿಗೆ ಹನಿನೀರಾವರಿ ಘಟಕ ಅಳವಡಿಕೆಗೆ ಸಂಸ್ಥೆಗಳನ್ನು ಗುರುತಿಸಲು ಕ್ರಮವಹಿಸಲಾಗಿದೆ.

ಉಲ್ಲೇಖ (1)ರನ್ವಯ ಪ್ರಸ್ತಕ್ತ ಸಾಲಿಗೆ ತೋಟಗಾರಿಕೆ ಇಲಾಖೆಯಲ್ಲಿ 55 ಸಂಸ್ಥೆಗಳನ್ನು ನಿಯಮನುಸರವಾಗಿ ಗುರುತಿಸಲಾಗಿದೆ. ಸದರಿ 55 ಸಂಸ್ಥೆಗಳೊಂದಿಗೆ ಹನಿ ನೀರಾವರಿ ಅಳವಡಿಸಲು ವಿವಿಧ ಉಪಕರಣಗಳ ದರಗಳನ್ನು ಉಲ್ಲೇಖ (1) ರನ್ವಯ negotiate ಮಾಡಿ ವ್ಯಾಟ್ ಸೇರಿದಂತೆ ದರ ನಿಗದಿಪಡಿಸಿ ಅನುಮೋದಿಸಿರುತ್ತಾರೆ.

ಸದರಿ ಸಂಸ್ಥೆಗಳು ರೇಷ್ಮೆ ಇಲಾಖೆಗೆ ಸಂಬಂಧಿಸಿದಂತೆ ರೇಷ್ಮೆ ಬೆಳೆಗಾರರು ಹಿಪ್ಪುನೇರಳೆ ತೋಟಗಳಿಗೆ ಹನಿ ನೀರಾವರಿ ಘಟಕ ಅಳವಡಿಸಲು ಆಸಕ್ತಿಯಿದ್ದಲ್ಲಿ, ಒಪ್ಪಿಗೆ ಸೂಚಿಸಿರುವುದರೊಂದಿಗೆ ಒಂದು ವರ್ಷದ ಅವಧಿಗೆ ಚಾಲ್ತಿಯಲ್ಲಿರುವ Nationalized Bankನಿಂದ ಪಡೆದ ರೂ.1.00 ಲಕ್ಷಗಳ Bank Guarantee, ಉಪಕರಣಗಳಿಗೆ BIS validity certificate ಹಾಗೂ ಇಲಾಖೆ ಷರುತ್ತುಗಳಿಗೆ ಒಪ್ಪಿ ರೂ.100/- ಛಾಪಾ ಕಾಗದದಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳಲು ದಿನಾಂಕ 30.9.2014ರೊಳಗಾಗಿ ನೀಡುವಂತೆ ಉಲ್ಲೇಖ(2)ರಲ್ಲಿ ತಿಳಿಸಲಾಗಿತ್ತು.

ಇದರನ್ವಯ ಒಟ್ಟು 28 ಸಂಸ್ಥೆಗಳು ಸ್ಪಂದಿಸಿದ್ದು, ಉಲ್ಲೇಖ (2)ರಲ್ಲಿ ಅಪೇಕ್ಷಿಸಿರುವ ದಾಖಲಾತಿ ಮತ್ತು ವಿವರಗಳನ್ನು ಒದಗಿಸಿರುತ್ತಾರೆ. ದಾಖಲಾತಿಗಳನ್ನು ಪರಿಶೀಲಿಸಲಾಗಿ ಈ ಪೈಕಿ 23 ಸಂಸ್ಥೆಗಳ ದಾಖಲಾತಿಗಳು ಕ್ರಮಬದ್ಧವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರೇಷ್ಮೆ ಬೆಳೆಗಾರರ ಹಿಪ್ಪುನೇರಳೆ ತೋಟಗಳಿಗೆ ಹನಿನೀರಾವರಿ ಘಟಕಗಳನ್ನು ಅಳವಡಿಸಲು ಮೊದಲ ಹಂತದಲ್ಲಿ 23 ಸಂಸ್ಥೆಗಳನ್ನು ಗುರುತಿಸಲಾಗಿದೆ.

| ಕ್ರ. ಸಂ. | ಹನಿ ನೀರಾವರಿ ಸಂಸ್ಥೆಯ ಹೆಸರು |
|---|---|
| 1 | ಮೆ: ಎವರ್ ಗ್ರೀನ್ ಇರಿಗೇಷನ್ಸ್, 226/8 7ನೇ ಕ್ರಾಸ್, ಬಳ್ಳಪ್ಪ ಇಂಡಸ್ಟ್ರೀಯಲ್ ಲೇಔಟ್, ಮಾಗಡಿ ರಸ್ತೆ, ಬೆಂಗಳೂರು-23. |
| 2 | M/s Netafim Irrigation India Pvt, Ltd No.482, 6th Main, 11th cross, ಮಹಾಲಕ್ಷ್ಮಿಪುರಂ, ಬೆಂಗಳೂರು-86. |
| 3 | ಮೆ: ನಾಗಾರ್ಜನ ಫರ್ಟಿಲೈಜರ್ಸ್ ಮತ್ತು ಕೆಮಿಕಲ್ಸ್ ಲಿಮಿಟೆಡ್, ನಂ.510, 3ನೇ ಎ ಕ್ರಾಸ್, 2ನೇ ಮೈನ್, 3ನೇ ಬ್ಲಾಕ್, ಆರ್‌ಎಂವಿ.II ಬಡಾವಣೆ, ಡಾಲರ್ಸ್ ಕಾಲೋನಿ, ಬೆಂಗಳೂರು-24 |
| 4 | ಮೆ: ಗೋದಾವರಿ ಪಾಲಿಮರ್ಸ್ ಪ್ರೈಲಿ, ನಂ.161, ನೆಲ ಮಹಡಿ 4ನೇ ಬಿ ಕ್ರಾಸ್, ಲಾಲಭಾಗ ರೋಡ್ ಖಾದರ ಶರೀಫ್ ಗಾರ್ಡನ್, ಬೆಂಗಳೂರು-27. |
| 5 | ಮೆ: ಕಿಸಾನ್ ಮೌಲ್ಡಿಂಗ್ಸ್ ಲಿಮಿಟೆಡ್, 13/14, 2ನೇ ಮಹಡಿ, ಎಂ. ಬ್ಲಾಕ್, ಯೂನಿಟಿ ಬಿಲ್ಡಿಂಗ್, ಜೆ.ಸಿ. ರಸ್ತೆ, ಬೆಂಗಳೂರು-560002. |
| 6 | ಮೆ: ಸಿಗ್ನೇಟ ಇಂಡ್ಟ್ರೀಸ್ ಲಿಮಿಟೆಡ್, 314/3, SDA Compound Lasudia Mori, Dewasnaka ಇಂಡೋರ-452010. ಸ್ಥಳಿಯ ವಿಳಾಸ:-ಸಿಗ್ನೇಟ ಇಂಡ್ಟ್ರೀಸ್ ಲಿಮಿಟೆಡ್, ಪ್ಲಾಟ್ ನಂ:45, 1ನೇ ಬ್ಲಾಕ್, ಅಲಿಯಾಬಾದ್ ಇಂಡಸ್ಟ್ರೀಯಲ್ ಎರಿಯಾ, ಬಿಜಾಪುರ. |
| 7 | ಮೆ: ಸುಜಯ ಇರಿಗೇಶನ್ ಪ್ರೈಲಿ, 86, ಮುಖ್ಯ ರಸ್ತೆ. ಪೇಟೆ ಚನ್ನಪ್ಪ ಇಂಡಸ್ಟ್ರಿಯಲ್ ಎಸ್ಟೇಟ್, ಕಾಮಾಕ್ಷಿಪಾಳ್ಯ, ಬೆಂಗಳೂರು – 560079, |
| 8 | M/s EPC Industries Ltd., No.117/119, Rayapura industrial area, Near Railway goods shed, Rayapur, Dharwad 580009. |
| 9 | ಮೆ: ವೇದಾಂತ ಇರಿಗೇಷನ್ ಸಿಸ್ಟಮ್ ಪ್ರೈಲಿ, 93 7ನೇ ಮೈನ್, 3ನೇ ಪೇಸ್, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು-560058. |
| 10 | ಮೆ: ಹಿಮಾದ್ರಿ ಇರಿಗೇಷನ್ಸ್, ನಂ.81, ಕರಿಯೋಬನಹಳ್ಳಿ, ತಿಗಳರಪಾಳ್ಯ ಮುಖ್ಯ ರಸ್ತೆ, ಮಾರುತಿ ಇಂಡ್ಸ್ಟ್ರೀಯಲ್ ಎಸ್ಟೇಟ್ ಹತ್ತಿರ, ಪೀಣ್ಯ 2ನೇ ಹಂತ, ಬೆಂಗಳೂರು-58. |
| 11 | ಮೆ: ಶ್ರೀ. ಸುಧರ್ಶನ್ ಪ್ಲಾಸ್ಟಿಕ್ಸ್, ಹೊಸಪೇಟೆ ರೋಡ್, ತಿಪಟೂರು. ತುಮಕೂರು ಜಿಲ್ಲೆ. ಸಿ-8 Industrial Estate BH Road, ತಿಪಟೂರು. |
| 12 | ಮೆ: ವಾಹಿನಿ ಇರಿಗೇಷನ್ ಪ್ರೈಲಿ, ಣಂ.495/1, ದೊಡ್ಡ ಹೊಸೂರು ಗೇಟ್, ಕುಣಿಗಲ್ ರೋಡ್, ಗುಲ್ಲೂರು ಪೋಸ್ಟ್, ತುಮಕೂರು ಜಿಲ್ಲೆ. ಕರ್ನಾಟಕ 572 118 |
| 13 | ಮೆ: ಆಗ್ರೋಪ್ಲಾಸ್ಟ್, ಇಂಡಸ್ಟ್ರೀಯಲ್ ಎಸ್ಟೇಟ್, NH-206, ಬಂಡಿಹಳ್ಳಿ ಗೇಟ್, ತಿಪಟೂರು-572201 |
| 14 | ಮೆ: ಮೇಗಾ ಆಗ್ರೋ ಟೆಕ್, ಪ್ರೈಲಿ, 196 ಅರಕೆರೆ, ಬನ್ನೇರಘಟ್ಟ ರಸ್ತೆ, ಮಂತ್ರಿ ಫ್ಯಾರಡೈಸ್ ಎದುರು, ಬೆಂಗಳೂರು-560076. |
| 15 | ಮೆ: ದಾಸ ಅಗ್ರೊ ಪ್ಲಾಸ್ಟ ಪ್ರೈಲಿ, ಗೇಟ್ ನಂ-2, ಕೋಲವಾಡಿ, ಪುಣೆ-411024 |
| 16 | M/s Supreme drip systems ನಂ.41/1, 2ನೇ ಮೈನ್, ಅಜೀಜ್ ಸೇಠ್ ಇಂಡಸ್ಟ್ರೀಯಲ್ ಟೌನ್, ನಾಯಂಡಹಳ್ಳಿ, ಬೆಂಗಳೂರು. |
| 17 | ಮೆ: ಕಾವೇರಿ ಪೈಪ್ಸ್, 12/6, 41 ನಾಯಂಡಹಳ್ಳಿ ಮೈಸೂರು ರಸ್ತೆ, ಬೆಂಗಳೂರು-560039. |
| 18 | ಮೆ: ಮಂಗಳಂ ಪೈಪ್ಸ್ ಪ್ರೈಲಿ, 847, 5ನೇ ಮುಖ್ಯ ರಸ್ತೆ, 5 ಕ್ರಾಸ್, ಎಂಸಿ ಲೇಔಟ್, ವಿಜಯನಗರ, ಬೆಂಗಳೂರು-40. |
| 19 | M/s Bothra Agro Equipments Pvt, Ltd, Industrial Estate, Nagar-Poona Road, Ahmednagar(MS) |

| ಕ್ರ ಸಂ. | ಹನಿ ನೀರಾವರಿ ಸಂಸ್ಥೆಯ ಹೆಸರು |
|---|---|
| 20 | ಮೆ: ಪ್ರೀಮಿಯರ್ ಇರಿಗೇಷನ್ ಅಡ್ರಿಟೆಕ್, 271 ಮೈಸೂರು ರೋಡ್, ಬೆಂಗಳೂರು-560026. |
| 21 | M/s Metro Drip Irrigation (P) Ltd, No.6/3, MRR lane, SJP Road cross, Bangalore-02. |
| 22 | ಮೆ: ಕ್ಯಾಪ್ಟನ್ ಪಾಲಿ ಪ್ಲಾಸ್ಟ್ ಇರಿಗೇಷನ್ ಸಿಸ್ಟಂ ಪ್ರೈಲಿ., ಸ. ನಂ.267, ಪ್ಲಾಟ್ ನಂ:10ಎ, ಹಾಗೂ 11, NH8-B, Sha. .par (Dist: Rajkot, Gujarat) |
| 23 | ಮೆ: ಚೈತ್ರಾ ಇರಿಗೇಷನ್, #3, 5ನೇ ಸಿ ಮುಖ್ಯ ರಸ್ತೆ, ಕೆ.ಆರ್. ರೋಡ್, ಟಾಟಾ ಸಿಲ್ಕ್ ಫಾರಂ, ಬೆಂಗಳೂರು-560070. |

ರೇಷ್ಮೆ ಬೆಳೆಗಾರರು 2014-15ನೇ ಸಾಲಿನಲ್ಲಿ ಇಲಾಖೆಯು ಗುರುತಿಸಿರುವ ಮೇಲ್ಕಂಡ ಯಾವುದಾದರು ಸಂಸ್ಥೆಗಳ ಮೂಲಕ ಹಿಪ್ಪುನೇರಳೆ ತೋಟಕ್ಕೆ ಹನಿ ನೀರಾವರಿ ಘಟಕ ಅಳವಡಿಸಿಕೊಳ್ಳಬಹುದಾಗಿದೆ. ಸದರಿ ಆದೇಶವು ದಿ:30.11.2015 ರವರೆಗೆ ಅಥವಾ ಮುಂದಿನ ಆದೇಶದವರೆಗೆ ಚಾಲ್ತಿಯಲ್ಲಿರುತ್ತದೆ. ಕ್ಷೇತ್ರಮಟ್ಟದಲ್ಲಿ ಹನಿನೀರಾವರಿ ಘಟಕ ಅಳವಡಿಕೆಗೆ ಉಲ್ಲೇಖ (1) ರಲ್ಲಿ ಅನುಮೋದಿಸಿದ ಉಪಕರಣಗಳ ದರಪಟ್ಟಿಯನ್ನು ಈ ಸುತ್ತೋಲೆಗೆ ಅಡಕವಿರಿಸಿದೆ. ಅನುಷ್ಠಾನಾಧಿಕಾರಿಗಳು ಕ್ಷೇತ್ರಮಟ್ಟದಲ್ಲಿ ಹನಿನೀರಾವರಿ ಅಳವಡಿಕೆಗಾಗಿ ಉಪಯೋಗಿಸುವ ಎಲ್ಲಾ ಹನಿನೀರಾವರಿ ಘಟಕ ಉಪಕರಣಗಳ BIS validity ಚಾಲ್ತಿಯಲ್ಲಿರುವುದನ್ನು ಖಚಿತ ಪಡಿಸಿಕೊಂಡು ಅಳವಡಿಸಲು ಕ್ರಮವಹಿಸುವುದು.

ಈಗಾಗಲೇ ಹನಿನೀರಾವರಿ ಅಳವಡಿಕೆಗೆ ಸಹಾಯಧನ ಮಂಜೂರಾತಿಗೆ ನೀಡಿರುವ ಮಾರ್ಗಸೂಚಿಗಳನ್ವಯ, ಫಲಾನುಭವಿಗಳನ್ನು ಗುರುತಿಸಿ ಘಟಕಗಳ ಅಳವಡಿಕೆ ಕುರಿತಾದ ದಾಖಲಾತಿಗಳನ್ನು ಪಡೆದುಕೊಂಡು ಸೂಕ್ತ ಪರಿಶೀಲನೆ ನಂತರ ಅಂತಹ ಅರ್ಹ ರೇಷ್ಮೆ ಬೆಳೆಗಾರರ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಿ ಉಲ್ಲೇಖ (3) ಮತ್ತು (4)ರ ಮಾರ್ಗಸೂಚಿಯನ್ವಯ ಸಹಾಯಧನ ವಿತರಿಸಲು ಕ್ರಮವಹಿಸುವುದು. ಈ ಕುರಿತು ರೇಷ್ಮೆ ಕೃಷಿಕರು ಹಾಗೂ ಗುರುತಿಸಲಾಗಿರುವ ಸಂಸ್ಥೆಗಳ ಜೊತೆ ಸೂಕ್ತ ಸಮನ್ವಯ ಸಾಧಿಸಲು ಸೂಚಿಸಿದೆ.

24/12

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರು

ಇವರಿಗೆ
ಎಲ್ಲಾ ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್/ಕುಣಿಗಲ್/ಮಾಗಡಿ.
ಪ್ರತಿಯನ್ನು ಎಲ್ಲಾ ರೇಷ್ಮೆ ಜಂಟಿ ನಿರ್ದೇಶಕರು ರವರ ಮಾಹಿತಿಗೆ ಕಳುಹಿಸಿದೆ.

ಪ್ರತಿಯನ್ನು ಮೇಲಿನ ಎಲ್ಲಾ 23 ಸಂಸ್ಥೆಗಳ ಮಾಹಿತಿ ಮತ್ತು ಅರ್ಹ ರೈತ ಫಲಾನುಭವಿಗಳ ಹಿಪ್ಪುನೇರಳೆ ತೋಟಗಳಿಗೆ ಉತ್ತಮ ಗುಣಮಟ್ಟದ ಹನಿ ನೀರಾವಿ ಘಟಕಗಳನ್ನು ಅಳವಡಿಸಲು ತಿಳಿಸಿದೆ.

:ಶ್ರೀ:22.12.14